# ನಿಮ್ಮ ಸುರಕ್ಷೆ ನಮ್ಮ ಕೈಯಲ್ಲಿ..

■ ಕಿರಣ್ ಇಜಿಮಾನ್



**ಎಳೆಯ ಮಕ್ಕಳು ಹೇಳದೆ ಕೇಳದೆ ಕಾರು ಓಡಿಸಿಕೊಂಡು ಹೋದರೆ ಏನು ಮಾಡುವುದು ಎಂಬ ಭಯವೇ? ಮಕ್ಕಳ ಮತ್ತು ಕಾರಿನ ನಿಯಂತ್ರಣ ನಿಮ್ಮ ಕೈಯಲ್ಲಿ ಇರಲಿದೆ..**

'ನಮ್ಮ 7 ವರ್ಷದ ಮಗ ಈಗಲೇ ಕಾರ್ ಓಡಿಸೋಕೆ ಕಲ್ತಿದ್ದಾನೆ.. ನಾನೇ ಕಾರು ಓಡಿಸ್ತೀನಿ ಅಂತಾನೆ, ಆದರೆ ನಾವೇ ಈಗ ಬೇಡ, ಆಮೇಲೆ ನೋಡೋಣ ಅಂದಿದ್ದೇವೆ.' ಇದು ಈಗಿನ ಕಾಲದ ಪೋಷಕರು ತಮ್ಮ ಮಕ್ಕಳ ಬಗ್ಗೆ ಕೊಚ್ಚಿಕೊಳ್ಳುವ ಬಗೆ. ತಮ್ಮ ಮಕ್ಕಳು ವಯಸ್ಸಿಗೂ ಮೀರಿದ ಸಾಧನೆ ಮಾಡುತ್ತಿದ್ದಾರೆ. ಅವರು ನಿಜಕ್ಕೂ ತುಂಬಾ ಬುದ್ಧಿವಂತರು ಎಂದು ಅವರಿಗೆ ಹೆಮ್ಮೆ.

ಇದು ಒಳ್ಳೆಯ ಬೆಳವಣಿಗೆಯೇ? ಮಕ್ಕಳು ಶಾರ್ಪ್ ಆಗಿರಬೇಕು, ಚುರುಕಾಗಿರಬೇಕು. ಅದು ಅತಿಯಾದರೆ ಮತ್ತೊಂದು ಬಗೆಯ ತೊಂದರೆಗೆ ಈಡು ಮಾಡುತ್ತದೆ. ತಂತ್ರಜ್ಞಾನದ ಮತ್ತು ಸವಲತ್ತಿನ ದುರುಪಯೋಗ ಅವುಗಳಲ್ಲಿ ಒಂದು. ನಗರಗಳಲ್ಲಿ ಹೆಚ್ಚಾಗಿ ಪೋಷಕರಿಬ್ಬರೂ ಹೊರಗೆ ದುಡಿಯಲು ಹೋಗುತ್ತಾರೆ. ಮನೆಯಲ್ಲಿ ಕಾರು ಇರುವುದು ತೀರಾ ಸಾಮಾನ್ಯ. ಎಲ್ಲ ಸಂದರ್ಭದಲ್ಲಿ ಅವುಗಳನ್ನು ಬಳಸುವುದಿಲ್ಲ. ಹಾಗಾಗಿ ಮಕ್ಕಳಿಗೆ ಚಲನಚಿತ್ರ ನೋಡಿಯೋ ಇಲ್ಲವೇ ಕಾರ್ ರೇಸ್‌ನಂತಹ ಗೇಮ್ ಆಡಿಯೋ ನಿಜ ಜೀವನದಲ್ಲೂ ಹಾಗೆಯೇ ಕಾರ್ ಓಡಿಸಬೇಕೆಂಬ ಆಸೆ ಇರುತ್ತದೆ.

ಪೋಷಕರು ಮನೆಯಲ್ಲಿ ಇಲ್ಲದ ಸಂದರ್ಭ ನೋಡಿಕೊಂಡು, ಕ್ರೇಝ್‌ಗಾಗಿ ಈ ರೀತಿ ಕಾರುಗಳನ್ನು ಓಡಿಸಿಕೊಂಡು ಹೋಗಿ ಅವಾಂತರ ಮಾಡುವ ಸಾಕಷ್ಟು ಘಟನೆಗಳ ಬಗ್ಗೆ ನಾವು ಆಗಾಗ ಕೇಳುತ್ತಿರುತ್ತೇವೆ. ಲೈಸನ್ಸ್ ಇಲ್ಲದೆಯೇ ಕಾರ್ ಓಡಿಸುವುದು, ತಾವು ಕೂಡಾ ಯಾವುದೇ 'ಫಾರ್ಮುಲಾ ಒನ್ ಡ್ರೈವರ್'ಗಿಂತ ಕಡಿಮೆಯಿಲ್ಲ ಎಂಬಂತೆ ಪೋಸು ಕೊಡುವುದು ನಡೆಯುತ್ತದೆ. ಮದ್ಯಪಾನ ಮಾಡಿ ಕಾರು ಚಲಾಯಿಸುವವರಿಗೇನೂ ಕಡಿಮೆಯಿಲ್ಲ. ಹಾಗಾಗಿ ಭವಿಷ್ಯದ ಕಾರುಗಳಲ್ಲಿ ಈ ರೀತಿಯ ದುರಂತಗಳನ್ನು ತಡೆಯುವ ಮತ್ತು ಸಾಕಷ್ಟು ಹೆಚ್ಚಿನ ಸುರಕ್ಷತಾ ಅಂಶಗಳನ್ನು ಅಳವಡಿಸುವ ಪ್ರಯೋಗಗಳು ನಡೆಯುತ್ತಿವೆ.

ಏರ್ ಬ್ಯಾಗ್, ಎಬಿಎಸ್, ಅಟೊಮ್ಯಾಟಿಕ್ ಸಿಸ್ಟಮ್ಸ್, ಸೀಟ್ ಬೆಲ್ಟ್ ಎಂದೆಲ್ಲ ಹಲವಾರು ಸುರಕ್ಷತಾ ಅಂಶಗಳನ್ನು ಆಧುನಿಕ ಕಾರುಗಳು ಹೊಂದಿದ್ದರೂ ಕೂಡಾ, ಅಪಘಾತದ ಸಂಖ್ಯೆಯೇನೂ ಕಡಿಮೆಯಾಗಿಲ್ಲ. ಅಪಘಾತವಾದರೂ ಚಾಲಕನಿಗೆ, ಪ್ರಯಾಣಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಗರಿಷ್ಠ ಭದ್ರತೆ ಒದಗಿಸುವ ಕಾರುಗಳು ಭವಿಷ್ಯದಲ್ಲಿ ರಸ್ತೆಗಿಳಿಯಲಿವೆ. ಈ ಸಾಲಿಗೆ ಹೊಸ ಸೇರ್ಪಡೆ 'ಟೀನ್ ಡ್ರೈವರ್' ಎಂಬ ಸಾಫ್ಟ್‌ವೇರ್ ಆಧಾರಿತ ಉಪಕರಣ. ಅಮೆರಿಕದ ಜನರಲ್ ಮೋಟಾರ್ಸ್‌ನ ಅಂಗಸಂಸ್ಥೆಯಾದ ಶೆವರ್ಲೆ ಕಾರು ಕಂಪೆನಿ ತನ್ನ ಮುಂದಿನ ಕಾರುಗಳಲ್ಲಿ ಈ ತಂತ್ರಜ್ಞಾನವನ್ನು ಬಳಸಲಿದೆ. ಅಲ್ಲದೆ ಇತರ ಕಾರು ತಯಾರಿಕ ಸಂಸ್ಥೆಗಳು ಕೂಡಾ ಈ ರೀತಿಯ ಸಾಧ್ಯತೆಯ ಬಗ್ಗೆ ಪ್ರಯೋಗಗಳನ್ನು ನಡೆಸಿವೆ.

ಈ ತಂತ್ರಜ್ಞಾನ ಬಳಸುವ ಕಾರುಗಳು ನಿಮ್ಮ ಸ್ಮಾರ್ಟ್ ಫೋನ್ ಜೊತೆಗೆ ಸಂಪರ್ಕದಲ್ಲಿರುತ್ತವೆ. ಕಾರಿನ ಚಲನವಲನದ ಪ್ರತಿ ಮಾಹಿತಿಯೂ ಇಲ್ಲಿ ದಾಖಲಾಗುತ್ತದೆ. ಸ್ವಯಂಚಾಲಿತ ಕಾರು ನಿರ್ವಹಣಾ ವ್ಯವಸ್ಥೆಯನ್ನೂ ಈ ಕಾರು ಹೊಂದಿರುತ್ತದೆ. ವೇಗ ನಿಯಂತ್ರಕ, ಸಿಗ್ನಲ್ ಮತ್ತು ರಸ್ತೆ ಸೂಚನಾ ಫಲಕಗಳ ಗುರುತಿಸುವಿಕೆ, ಚಾಲಕನು ಎಚ್ಚರ ತಪ್ಪಿದರೆ, ಕಾರು ನಿಯಂತ್ರಣ ಕಳೆದುಕೊಂಡರೆ, ತಾನಾಗಿಯೇ ಎಂಜಿನ್ ಆಫ್ ಆಗುತ್ತದೆ. ಅಷ್ಟು ಮಾತ್ರವಲ್ಲದೇ ಸ್ಮಾರ್ಟ್‌ಫೋನ್ ಮೂಲಕವೂ ಕಾರನ್ನು ನಿಯಂತ್ರಿಸಬಹುದು.

ಅಕಸ್ಮಾತ್ ನಿಮ್ಮ ಗಮನಕ್ಕೆ ಬಾರದೆ ಚಿಕ್ಕ ಮಕ್ಕಳು ಕಾರು ಚಲಾಯಿಸಿಕೊಂಡು ಹೋದರೆ, ತಕ್ಷಣವೇ 'ಟೀನ್ ಡ್ರೈವರ್' ಎಂಬ ಸ್ವಯಂಚಾಲಿತ ವ್ಯವಸ್ಥೆ ಆನ್ ಆಗುತ್ತದೆ ಮತ್ತು ನಿಮ್ಮ ಸ್ಮಾರ್ಟ್‌ಫೋನ್‌ಗೆ ಕಾರಿನ ಬಗ್ಗೆ ವಿವರಗಳು ಬರುತ್ತವೆ. ಅಲ್ಲದೇ ಸಂಚಾರ ನಿಯಂತ್ರಣ ಕೇಂದ್ರದೊಂದಿಗೂ ಸಂಪರ್ಕ ಸಾಧಿಸುತ್ತದೆ, ಟ್ರಾಫಿಕ್ ವ್ಯವಸ್ಥೆ– ಸ್ಥಿತಿಯ ಬಗ್ಗೆ ಮಾಹಿತಿ ಪಡೆದುಕೊಂಡು ಸಾಗುತ್ತದೆ. ಅಂದರೆ ಮುಂದೆ ರಸ್ತೆ ಬ್ಲಾಕ್ ಆಗಿದ್ದರೆ, ನಿಮ್ಮ ಕಾರ್‌ಗೆ ಈ ಬಗ್ಗೆ ಮೊದಲೆ ಮುನ್ಸೂಚನೆ ಲಭಿಸಿರುತ್ತದೆ. ಪ್ರತಿ ಪ್ರಯಾಣದ ಕೊನೆಯಲ್ಲಿ ಸಂಪೂರ್ಣ ಮಾಹಿತಿಯುಳ್ಳ ಡ್ರೈವ್ ರಿಪೋರ್ಟ್ ಅನ್ನೂ ಇದು ಒದಗಿಸುತ್ತವೆ.

ನೀವು ರಸ್ತೆಯ ಮೇಲೆ ನಿಗಾ ವಹಿಸದಿದ್ದರೂ ನಿಮ್ಮ ಕಾರ್ ಮಾತ್ರ ಪ್ರತಿಕ್ಷಣವೂ ನಿಗಾವಹಿಸಿಕೊಂಡೇ ಸಾಗುತ್ತದೆ. ಈ ರೀತಿಯ ವ್ಯವಸ್ಥೆಯ ಪ್ರಾಯೋಗಿಕ ಸಂಚಾರ ನಡೆಯುತ್ತಿದೆ. ಇದು ಫಲಕಾರಿಯಾದರೆ ಮುಂದೆ ಸಂಪೂರ್ಣ ಸ್ವಯಂಚಾಲಿತ ಕಾರುಗಳು ರಸ್ತೆಗೆ ಇಳಿದರೂ ಅಚ್ಚರಿಯಿಲ್ಲ. ■